ಇಲಾಖೆಯಿಂದ ತಕ್ಷಣ ಪರಿಹಾರವನ್ನು ಕೊಡಿಸಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಛೇರ್ಮನ್ : ಮಾನ್ಯ ಹಂಪನಗೌಡ ಬಾದರ್ಲಿಯವರೆ ಮಾತನಾಡಿ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಛೇರ್ಮನ್‌ರವರೆ, ನನ್ನದು ಗಮನ ಸೆಳೆಯುವ ಸೂಚನೆ ಇದೆ.

ಚೇರ್ಮನ್ : ಅದನ್ನು ಪ್ರಶ್ನೋತ್ತರದ ನಂತರ ತೆಗೆದುಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳೇ, ಬೆಳ್ತಂಗಡಿಗೆ ಸಂಬಂಧಪಟ್ಟ ವಿಚಾರವನ್ನು ಗಮನಿಸಿ. ಮಾನ್ಯ ಪ್ರಭಾಕರ ಬಂಗೇರಾರವರೆ, ಮಾನ್ಯ ಮಂತ್ರಿಗಳು ಗಮನಿಸುತ್ತೇನೆಂದು ಹೇಳಿದ್ದಾರೆ.

ಕಂದಾಯ ನಿವೇಶನಗಳ ನೋಂದಣಿ

240 (1585) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

A) Whether the Governmnet is aware of the fact that the Government is losing huge revenue with bar on registering revenue sites; If so since how many months the order is existing;

B) Is it not a fact that due to bar on registering revenue sites many citizens are deprived of sellimg their property for their children's education and marriage expenses;

C) If so the action that is going to be initiated by the Government to reinstate the registration procedure?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

A) There is no ben on registration of reenue sites.

ಕಂದಾಯ ನಿವೇಶನಗಳ ನೋಂದಣಿಯ ಮೇಲೆ ನಿಷೇಧ-ವಿರುವುದಿಲ್ಲ.

B) Does not arise.
ಉದ್ಭವಿಸುವುದಿಲ್ಲ.

C) Does not arise.
ಉದ್ಭವಿಸುವುದಿಲ್ಲ.

(8-00 PM)

ಶ್ರೀ ಐವಾನ್ ನಿಗ್ಲಿ : ನಮ್ಮ ಮಂತ್ರಿಗಳು ಮತ್ತು ಅಧಿಕಾರಿಗಳು ಈ ಸಭಾಂಗಣದಲ್ಲಿ ಕುಳಿತು, ಅಥವಾ ವಿಧಾನಸೌಧದ ಅಂಗಳದಲ್ಲಿ ಕುಳಿತು ಉತ್ತರ ಕೊಟ್ಟಿದ್ದಾರೆ. ನಿಜಸ್ಥಿತಿ ನೋಡಬೇಕಾದರೆ, ಇವರು ಅಲ್ಲಿಗೆ ಹೋಗಬೇಕು. ಈ ಏಳು ಸಿಎಂಸಿ ಮತ್ತು ಟಿಎಂಸಿ ಗಳ ಹತ್ತಿರ ಹೋಗಬೇಕು. ನಾನು ಅಲ್ಲಿಗೆ ಹೋಗಿ ರಿಜಿಸ್ಟ್ರೇಷನ್ ಮಾಡಲಿಕ್ಕೆ ಕೇಳಿದರೆ, ರಿಜಿಸ್ಟ್ರೇಷನ್ ಈಗ ಮಾಡುವುದಿಲ್ಲ, ರೆವಿನ್ಯೂ ಲ್ಯಾಂಡ್ ಈಗ ರಿಜಿಸ್ಟ್ರೇಷನ್ ಮಾಡುವುದಿಲ್ಲ. ಏಕೆ ಎಂದು ಕೇಳಿದರೆ, ಸರ್ಕಾರದಿಂದ ಆದೇಶ ಬಂದಿದೆ, ರೆವಿನ್ಯೂ ಲ್ಯಾಂಡ್ ರಿಜಿಸ್ಟ್ರೇಷನ್ ಮಾಡಬಾರದು only BDA sites ಮಾತ್ರ ರಿಜಿಸ್ಟ್ರೇಷನ್ ಮಾಡಬಹುದು ಎಂದು ಹೇಳುತ್ತಾರೆ. ಪಕ್ಕದಲ್ಲಿ ಇನ್ನೊಬ್ಬರೂ ಬರುತ್ತಾರೆ. ಸಾರ್, ಸಾರ್ ನಾವು ನಿಮಗೆ ಮಾಡಿಕೊಡುತ್ತೇವೆ, 10 ಸಾವಿರ ರೂಪಾಯಿ ಕೊಟ್ಟರೆ 30 X 40 ಸೈಟ್ಸ್ ನಿಮಗೆ ರಿಜಿಸ್ಟ್ರೇಷನ್ ಮಾಡಿ ಕೊಡುತ್ತೇವೆಂದು ಹೇಳುತ್ತಾರೆ. ಅದು ಹೇಗೆ ಎಂದರೆ, speed up cost ಅಂತೆ. ಅದೊಂದು ಪ್ರಕ್ರಿಯೆ. speed post ತತ್ಕಾಲ್‌ನಲ್ಲಿ ರೈಲ್ವೇ ಟಿಕೆಟ್ ಬುಕ್ ಮಾಡಬಹುದು. speed post ಮಾಡಿದರೆ ತಕ್ಷಣ ಒಂದೇ ದಿನದಲ್ಲಿ Delhiಗೆ ಹೋಗಬಹುದು. ಅದೇ ರೀತಿಯಾಗಿ speed up cost ತಕ್ಷಣ 5–10 ಸಾವಿರ ರೂಪಾಯಿ ಕೊಟ್ಟರೆ, ತಕ್ಷಣ ರಿಜಿಸ್ಟ್ರು ಮಾಡಿಕೊಡುತ್ತಾರಂತೆ. ಈ ಉತ್ತರ ಬಂದ ತಕ್ಷಣ ನಾನು ಸನ್ಮಾನ್ಯ ರಾಜಾಜಿನಗರ ಎಂಎಲ್‌ಎ ಹತ್ತಿರ ಮಾತನಾಡಿ ಕೇಳಿದೆ. ಅವರು ಎಲ್ಲಾ ಇಲಾಖೆಗಳಿಗೆ ಫೋನು ಮಾಡಿ ಕೇಳಿದಕ್ಕೆ, ಇಲ್ಲ ರಿಜಿಸ್ಟ್ರೇಷನ್ ಸ್ಟಾಪ್ ಆಗಿದೆ, ರಿಜಿಸ್ಟ್ರೇಷನ್ ಮಾಡುತ್ತಿಲ್ಲವೆಂದರು. ನನಗೆ ಉತ್ತರ ಏನು ಕೊಟ್ಟಿದ್ದಾರೆಂದರೆ, There is no ban on registration of revenue sites. ನಾನು ಕೇಳಿದ ಪ್ರಶ್ನೆ "whether the Government is aware of the fact that the Government is losing huge revenue with bar on registering revenue sites; If so, since how many months the order is existing"; ಅದಕ್ಕೆ ಉತ್ತರ ಕೊಟ್ಟಿದ್ದಾರೆ, There is no ban on registration of revenue sites. ಸಬ್ ರಿಜಿಸ್ಟ್ರಾರ್ ಆಫೀಸ್‌ಗೆ ಹೋದರೆ ಈ ತರಹ ನಡೆಯುತ್ತಿದೆ. ಇದಕ್ಕೆ ನಾನು ಏನು ಹೇಳುವುದು ಎಂದರೆ, ಇಲ್ಲಿ ಮಾಧ್ಯಮದವರು ಯಾರೂ ಇಲ್ಲ, ಹಿಂದೂ ಪತ್ರಿಕೆಯವರು ಇದ್ದಾರೆ ಬೇರೆ ಯಾರು ಇಲ್ಲ. ಮಾಧ್ಯಮದ

ಮೂಲಕ ತಾವು ನಾಳೆ ಈ ರೀತಿಯ ರಿಜಿಸ್ಟ್ರೇಷನ್ ನಡೆಯುತ್ತಿದ್ದರೆ ಸನ್ಮಾನ್ಯ ಮಂತ್ರಿಗಳು ಘೋಷಣೆ ಮಾಡಬೇಕು. ನಾಳೆಯೇ ಈ ರೀತಿ ರಿಜಿಸ್ಟ್ರೇಷನ್ ನಡೆಯುತ್ತಿದೆ, ಯಾರು ಬೇಕಾದರೂ ರಿಜಿಸ್ಟರ್ ಮಾಡಬಹುದು ಎಂದು ಹೇಳಿಕೆ ಕೊಡಬೇಕು.

ಶ್ರೀ ನೆ.ಲ.ನರೇಂದ್ರ ಬಾಬು : ತಮ್ಮ ಮುಖೇನ ರೆವಿನ್ಯೂ ಸಚಿವರಲ್ಲಿ ಈ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಈ ವೇದಿಕೆಯ ಮುಖೇನ ಈ ರಾಜ್ಯಕ್ಕೆ ವಿಶೇಷವಾಗಿ ರಾಜಧಾನಿಯ ಜನಗಳಿಗೆ ತಿಳಿಸಬೇಕೆಂದು ಕೋರುತ್ತೇನೆ. ಸಬ್ ರಿಜಿಸ್ಟಾರ್ ಆಫೀಸ್‌ಗಳಿಗೆ ಹೋದರೆ except ದಾಸನಪುರ, ಮಾದನಾಯ ಕನಹಳ್ಳಿ ಬಿಟ್ಟರೆ ಮಿಕ್ಕಿದ ಕಡೆ ಎಲ್ಲಾ ರೆವಿನ್ಯೂ ಸೈಟ್ಸ್‌ಗಳನ್ನು ರಿಜಿಸ್ಟಾರ್ ಮಾಡಬೇಕಾದರೆ ಬಹಳಷ್ಟು ಲಂಚವನ್ನು ಕೊಡುವ ಘಟನೆ ನಡೆಯುತ್ತಿದೆ. ಏನಾಗಿದೆ, ಸರ್ಕಾರ ಈ ರೀತಿ ಉತ್ತರ ಕೊಟ್ಟಿದೆ. ನಾನು ಮತ್ತು ನಿಗ್ಲಿಯವರು ಬಹಳಷ್ಟು ಜನ ಕುಳಿತುಕೊಂಡು ಈ ಬಗ್ಗೆ ವಿಚಾರ ಮಾಡಿದೆವು. ನಿನ್ನೆ ಕೂಡ ಮಾತನಾಡಿದೆವು. ಆಗ ಹೇಳುತ್ತಾರೆ, ಇಲ್ಲಾ, ರಿಜಿಸ್ಟ್ರೇಷನ್ ನಿಲ್ಲಿಸಿದರೆ, ಇವತ್ತು Government Order ಬರುತ್ತಿದೆ, ಹೀಗಾಗಿ ಎಲ್ಲಾ ನಿಲ್ಲಿಸಿದ್ದೇವೆಂದು ಹೇಳುತ್ತಾರೆ. ನೀವು ನಂಬುತ್ತೀರೋ ಇಲ್ಲವೋ ವಿಶೇಷವಾಗಿ ಜನಗಳಿಗೆ ತಮ್ಮ ಮಕ್ಕಳ ಮದುವೆ ಮಾಡಬೇಕು ಎಂದರೆ ಮಾರಲಿಕ್ಕೆ ಆಗುತ್ತಿಲ್ಲ, ಏನಾದರೂ ಮಕ್ಕಳಿಗೆ ಅಪ್ಪಿ ತಪ್ಪಿ ಹೈಯರ್ ಎಜುಕೇಷನ್ ಕೊಡಬೇಕು ಎಂದರೆ ಇದಕ್ಕಾಗಿ ಸೈಟ್ ಮಾರಬೇಕು ಎಂದರೆ ಆಗುತ್ತಿಲ್ಲ. ಅಡ್ಡಾದಿಡ್ಡಿ ಬೆಲೆಗೆ ಮಾರಬೇಕು BDA site ಗಳನ್ನು ಕೊಂಡುಕೊಳ್ಳುವ ಶಕ್ತಿಯಿರುವುದಿಲ್ಲ. ರಿಜಿಸ್ಟ್ರೇಷನ್ ಆಗದೇ ಇದ್ದರೆ ಇಂಥ ಸಮಸ್ಯೆ ಎಲ್ಲಾ ಆಗುತ್ತದೆ. ಒಂದು ಉದಾಹರಣೆಯನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಾದರೆ, ವಿಜಯನಗರದಲ್ಲಿ ಲಲಿತಾಂಬ ಎನ್ನುವ ಒಬ್ಬ ಸಬ್ ರಿಜಿಸ್ಟ್ರಾರ್‌ರವರು ಇದ್ದಾರೆ. ನೀವು ನಂಬುತ್ತೀರೋ ಇಲ್ಲವೋ, ಅವರು ಎಷ್ಟು ಹಣವನ್ನು ತೆಗೆದುಕೊಳ್ಳುತ್ತಾರೆಂದರೆ, ಅವರು ಬಹಳ ಯಂಗ್ ಸ್ಟಾರ್ ಇದ್ದಾರೆ. ಅವರು 30–40 ಸಾವಿರಕ್ಕಿಂತ ಕಡಿಮೆ ಮುಟ್ಟುವುದಿಲ್ಲ. ಬೆಂಗಳೂರು ನಗರದಲ್ಲಿ ಈ ರೀತಿ ಇದೆ. ಇದು ಸಬ್ ರಿಜಿಸ್ಟ್ರಾರ್‌ಗಳಿಗೆ ಸುಗ್ಗಿಯಾಗಿದೆ. ಇಂಥ ಸಬ್ ರಿಜಿಸ್ಟ್ರಾರ್‌ಗಳಿಗೆ ಲೋಕಾಯುಕ್ತ ಮತ್ತೊಂದು ಇಲಾಖೆಗಳು ಏನು ಮಾಡುತ್ತಿವೆ? ಈ ತರಹದ ದಂಧೆ ಶುರುವಾಗಿದೆ. ದಯವಿಟ್ಟು ಇದನ್ನು ನಿಲ್ಲಿಸಬೇಕು. ಬಹಳ ಸ್ಪಷ್ಟವಾಗಿ ತಿಳಿಸಬೇಕು, ಬಡವರಿಗೆ ಹಾಗೂ

ಮಧ್ಯಮವರ್ಗದವರಿಗೆ ಕಷ್ಟವಾಗಿದೆ. ರೆವಿನ್ಯೂ ಸೈಟ್ಸ್ ರಿಜಿಸ್ಟ್ರೇಷನ್ ಬ್ಯಾಬ್ ಆಗಿದೆಯೋ ಇಲ್ಲವೋ ನೀವು ಸ್ಪಷ್ಟವಾಗಿ ತಿಳಿಸಬೇಕು. ಜೊತೆಗೆ ಇಲ್ಲಿಂದ ಸ್ಪಷ್ಟವಾದ ಸಂದೇಶ ಹೋಗಲಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶಾಸಕರಾದಂಥ ಐವಾನ್ ನಿಗ್ಲಿಯವರು ಏನು ಪ್ರಶ್ನೆ ಕೇಳಿದ್ದಾರೆಂದರೆ, ಕಂದಾಯ ನಿವೇಶನಗಳ ಬಗ್ಗೆ ಕೇಳಿದ್ದಾರೆ. ಅವರು ಕಂದಾಯ ನಿವೇಶನದ definition ಹೇಳಿದರೆ ಒಳ್ಳೆಯದಾಗುತ್ತದೆ. ಕಂದಾಯ ನಿವೇಶನ ಎಂದು ಕಾನೂನಿನಲ್ಲಿ ಯಾವುದೇ recognition ಇಲ್ಲ. ಕಂದಾಯ ನಿವೇಶನ ಎಂದರೆ, ಅದರಲ್ಲಿ ಬೆಂಗಳೂರಿಗೆ ಸಂಬಂಧಪಟ್ಟಂತೆ ಆ ರೀತಿಯಾದ ವ್ಯವಸ್ಥೆ ಕಂದಾಯ ನಿವೇಶನ ಎಂದು ಬಂದಿದೆ. ಅಂದರೆ, ಯಾವ ಜಮೀನನ್ನು ಅದನ್ನು Conversation ಮಾಡಲಾರದೇ, agriculture ಇದ್ದಂಥ ಜಮೀನನ್ನು non-agriculture ಎಂದು ಮಾಡಲಾರದೇ, ಯಾವುದೇ ಒಂದು Development Authority ಯ permission ತೆಗೆದುಕೊಳ್ಳಲಾರದೇ, ಯಾವುದೇ ಒಂದು Development Charges, betterment fees ತುಂಬಲಾರದೇ, ಸರ್ಕಾರದ ಯಾವುದೇ ಅಧಿಕಾರಿಗಳಿಂದ permission ತೆಗೆದುಕೊಳ್ಳಲಾರದೇ ಯಾವ residential layout ಅನ್ನು ಮಾಡುತ್ತಾರೆ, ಅನಧಿಕೃತವಾಗಿ ಅಂಥ residential sitesಗೆ ಬೆಂಗಳೂರಿನಲ್ಲಿ revenue sites ಎಂದು ಕರೆಯುತ್ತಾರೆ. ಅದಕ್ಕೊಂದು revenue sites ಎನ್ನುವ ಗೌರವಯುತವಾದ ಪದವಿದೆ. ಹೀಗಾಗಿ ಅವರು ಏನು ಹೇಳುತ್ತಿದ್ದಾರೆ, ಇದನ್ನು ಬ್ಯಾನ್ ಮಾಡಿದ್ದೀರೋ ಇಲ್ಲವೋ ಎಂದು ಕೇಳುತ್ತಿದ್ದಾರೆ. ಈ ರೀತಿಯಾಗಿ ಅನಧಿಕೃತವಾದಂಥ ಸೈಟ್‌ಗಳನ್ನು ರಿಜಿಸ್ಟ್ರೇಷನ್ ಮಾಡುವುದು ಬ್ಯಾನ್ ಮಾಡಿದ್ದೀರಾ ಎಂದು ಕೇಳಿದ್ದಾರೆ. ನಾವು ಅದನ್ನು ಬ್ಯಾನ್ ಮಾಡಿಲ್ಲ. ಆದರೆ, ಕಳೆದ ಬಾರಿ ಇದೇ ಸದನದಲ್ಲಿ ನಾವೇನು Land Revenue Act ಗೆ ತಿದ್ದುಪಡಿ ತೆಗೆದುಕೊಂಡು ಬಂದೆವು, ಆ ಸಂದರ್ಭದಲ್ಲಿ, ಯಾವ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಸದೇ conversation ಮಾಡದೇ ಆ ರೀತಿ ಮಾರಾಟ ಮಾಡಿದರೆ, ಅಂಥವರಿಗೆ ಆ ಅಧಿಕಾರಿಗಳು ಮತ್ತು ಯಾರು ಮಾರಾಟದಲ್ಲಿ ಇನ್‌ವಾಲ್ವ್ ಆಗುತ್ತಾರೆ, ಅಂಥವರಿಗೆ ಜೈಲು ಶಿಕ್ಷೆ ಎನ್ನುವ ಕಾನೂನನ್ನು ತೆಗೆದುಕೊಂಡು ಬಂದೆವು. ಹೀಗಾಗಿ ತನ್ನಷ್ಟಕ್ಕೆ ತಾನೇ ರಿಜಿಸ್ಟ್ರೇಷನ್

ನಿಂತಿದೆಯೇ ಹೊರತು ಸರ್ಕಾರ ಕಂದಾಯ ನಿವೇಶನ ಎನ್ನುವುದನ್ನು ನಾವು ನಿಷೇಧ ಮಾಡುವುದಾಗಲಿ, ಬ್ಯಾನ್ ಮಾಡುವುದಾಗಲಿ, ನಾವು ಮಾಡಿಲ್ಲ. ಹೀಗಾಗಿ ಪ್ರಾರಂಭಿಸಬೇಕೆನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಅದಕ್ಕಾಗಿಯೇ ನಾವು ಆ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದು ಹೇಳಿದ್ದೇವೆ. ಮಾನ್ಯ ನರೇಂದ್ರ ಬಾಬುರವರು ಮತ್ತು ಐವಾನ್ ನಿಗ್ಲಿಯವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಹಿಂದೆ ಸದನದಲ್ಲಿ ಆ ಒಂದು ಕಾನೂನಿಗೆ ತಿದ್ದುಪಡಿಯನ್ನು ತರುವಂಥ ಸಂದರ್ಭದಲ್ಲಿ ಚರ್ಚೆಯಾಯಿತು. ಬೆಂಗಳೂರಿಗೆ ಸೀಮಿತವಾಗಿ ಹೇಳುವುದಾದರೆ, ಈ ರೀತಿ ಸಾವಿರಾರು ಸಂಖ್ಯೆಯಲ್ಲಿ ಕಂದಾಯ ನಿವೇಶನ ಎಂದು ಅವರು ಮಾಡಿಕೊಂಡಿದ್ದು ಈಗಾಗಲೇ ಕೆಲವು ವ್ಯವಹಾರಗಳು ಆಗಿರುವುದು ನಮ್ಮ ಗಮನಕ್ಕೆ ಬಂದಿದೆ. ಆ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದರು. ಅವತ್ತು ಅವರು ಮತ್ತು ನಾವು ಹೇಳಿದೆವು. ಈ ರೀತಿಯಾಗಿ ಯಾರು ನಿವೇಶನಗಳನ್ನು ಮಾಡಿಕೊಂಡಿದ್ದಾರೆ, ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಮುಂದೆ ಮಾಡುವುದು ಬಿಡಿ. ಬರುವಂಥ ದಿವಸಗಳಲ್ಲಿ ಮತ್ತೆ ಈ ರೀತಿ ಆಗಬಾರದು. ಈ ಒಳಗಾಗಿ ನಿವೇಶನಗಳನ್ನು ಮಾಡಿಕೊಂಡು ಯಾರು RCC ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರಿಗೆ ತೊಂದರೆಯಾಗಬಾರದೆನ್ನುವ ಉದೇಶ ಇಟ್ಟುಕೊಂಡು, ಹೊಸದಾದ ಕಾನೂನನ್ನು ತೆಗೆದುಕೊಂಡು ಬಂದೆವು. ಈಗಾಗಲೇ ಅದರ ಬಗ್ಗೆ ತಿದ್ದುಪಡಿಯಾಗಿದೆ. ಈಗಾಗಲೇ Town and Country Planning Act ಗೆ ತಿದ್ದುಪಡಿಯಾಗಿದೆ. ಅದರ ಮುಖಾಂತರ ಈ ರೀತಿಯಾಗಿ ಅನಧಿಕೃತವಾಗಿ ನಿವೇಶನ ಮಾಡಿಕೊಂಡು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ, ಅವುಗಳನ್ನು ಸಕ್ರಮೀಕರಣಿಗೊಳಿಸುವ ಸಲುವಾಗಿ ಈಗಾಗಲೇ ನಗರಾಭಿವೃದ್ಧಿ ಇಲಾಖೆಯಿಂದ rules ಅನ್ನು frame ಮಾಡುವಂಥ ಕೆಲಸ ನಡೆಯುತ್ತಿದೆ. ಹೀಗಾಗಿ, ಆದಷ್ಟು ಬೇಗನೇ ಈ ರೀತಿಯಾಗಿ ಕಂದಾಯ ನಿವೇಶನ ಎಂದೇನು ಕರೆಯುತ್ತಿದ್ದಾರೆ, ಅದರಲ್ಲಿ ಮನೆಗಳೇನು ಕಟ್ಟಿಕೊಂಡಿದ್ದಾರೆ, ಅದನ್ನು ಸಕ್ರಮಗೊಳಿಸುವ ಕಾರ್ಯಕ್ಕೆ ರಾಜ್ಯ ಸರ್ಕಾರ ಸ್ಪಂದಿಸುತ್ತದೆ. ಯಾರು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ, ಅವರಿಗೆ ಯಾವುದೇ ರೀತಿಯ ತೊಂದರೆಗಳನ್ನು ಕೊಡುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಹೀಗಾಗಿ ಈ ಬಗ್ಗೆ ಸರ್ಕಾರ ಏನು

ನಿರ್ಣಯ ತೆಗೆದುಕೊಂಡಿದೆ, ಆದಷ್ಟು ಬೇಗನೇ ಅನುಷ್ಠಾನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅತಿವೃಷ್ಟಿಯಿಂದ ಬೆಳೆನಾಶಕ್ಕೆ ಶಾಶ್ವತ ಪರಿಹಾರ ನೀಡುವುದು

137 (829) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ.(ಸಾಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶವಾದ ಸಾಗರ ತಾಲ್ಲೂಕಿನಲ್ಲಿ ಪ್ರತಿ ವರ್ಷ ಅತಿವೃಷ್ಟಿಯಿಂದ ಬೆಳೆ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅತಿವೃಷ್ಟಿಯಿಂದ ಬೆಳೆನಾಶಕ್ಕೆ ರೈತರಿಗೆ ಶಾಶ್ವತ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಬೆಳೆ ನಾಶಕ್ಕೆ ವಿಶೇಷ ವಿಮೆ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಸಾಗರ ತಾಲ್ಲೂಕಿನಲ್ಲಿ ತಾಳಗುಪ್ಪ ಹೋಬಳಿ ಹಾಗೂ ಕಸಬಾ ಹೋಬಳಿ ಸ್ವಲ್ಪ ಭಾಗ ಪ್ರತಿ ವರ್ಷವೂ ಅತಿವೃಷ್ಟಿಯಿಂದ ಬೆಳೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಶಾಶ್ವತ ಪರಿಹಾರ ನೀಡಲು ಅವಕಾಶ ಇರುವುದಿಲ್ಲ. ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಬೆಳೆನಾಶಕ್ಕೆ ಪರಿಹಾರ ನೀಡಲಾಗುತ್ತಿದೆ.

ಇ) ಸಿಆರ್‌ಎಫ್ ಮಾರ್ಗಸೂಚಿಗಳನ್ವಯ ಇರುವುದಿಲ್ಲ. ಸದ್ಯಕ್ಕೆ ಹಾಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಜಾರಿಯಲ್ಲಿರುತ್ತದೆ.

ಈ) ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಬೆಳೆನಾಶಕ್ಕೆ ಪರಿಹಾರ ನೀಡಲಾಗುತ್ತಿದೆ.

ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. : ನಾನು ಸತತವಾಗಿ ಮೂರು ವರ್ಷಗಳಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ನೆರೆ ಹಾವಳಿಯಿಂದ ಹೆಚ್ಚು ಮಳೆ ಬಂದು ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿ ಮತ್ತು ಕಸಬಾ ಹೋಬಳಿಯಲ್ಲಿ ಕನಿಷ್ಠ ವರ್ಷ ಎರಡೂವರೆಯಿಂದ